

ಬೆಳ್ಳಿ ಆಭರಣ ಈಗ ಹೊಸ ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ. ಬೆಳ್ಳಿ ಕಿವಿಯೋಲೆ, ಜುಮುಕಿ, ಹಾರ, ನೆಕ್ಲೇಸ್, ಬಳೆ ಎಲ್ಲವನ್ನೂ ಧರಿಸಲು ಇಂದು ಹೆಂಗಳೆಯರು ಖುಷಿಪಡುತ್ತಿದ್ದಾರೆ.

ಆಶಾ ಎಸ್. ಕುಲಕರ್ಣಿ

# ಬೆಳ್ಳಿ ಬೆಡಗು!

ಬೆಳ್ಳಿ ಆಭರಣ ಮತ್ತೆ ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ. ಹೊಳೆಹೊಳೆವ ದುಬಾರಿ ಚಿನ್ನಕ್ಕೆ ಪರ್ಯಾಯವಾಗಿ ಬೆಳ್ಳಿ ಒಡವೆಗಳು ಇಂದು ಧರಿಸಲು ಆರಾಮದಾಯಕವೂ, ಫ್ಯಾಷನಬಲ್ ಆಗಿಯೂ ಜನಪ್ರಿಯತೆ ಗಳಿಸುತ್ತಿವೆ. ದೊಡ್ಡ ಗಾತ್ರದ ಜುಮುಕಿ, ನೆಕ್ಲೇಸ್, ಹಾರ, ಬಳೆ, ಬ್ರೇಸ್ಲೆಟ್ ಮುಂತಾದ ವೈವಿಧ್ಯದ ಒಡವೆಗಳನ್ನು ಬೆಳ್ಳಿಯಲ್ಲಿ ತಯಾರಿಸಿ ಧರಿಸುವುದು ಈಗೀಗ ಮಹಿಳೆಯರ ಇಷ್ಟದ ವಿಚಾರವೇ ಆಗಿದೆ.

ಹಿಂದೆಲ್ಲಾ ಬೆಳ್ಳಿ ಆಭರಣ ಎಂದರೆ ಅದು ಕಾಲ್ಗೆಜ್ಜೆ, ಕಡಗ, ಕಾಲುಂಗುರ... ಇಷ್ಟೇ ಸೀಮಿತ ವ್ಯಾಪ್ತಿ ಹೊಂದಿತ್ತು. ಆದರೆ ಈಗ ಬೆಳ್ಳಿಯಲ್ಲೂ ಥರಾವರಿ ಆಭರಣ ಬಂದಿದ್ದು, ಧರಿಸಲು ಹಗುರ ಹಾಗೂ ಫ್ಯಾಷನಬಲ್ ಕೂಡ ಎನಿಸಿದೆ.

ಬೆಳ್ಳಿಯ ಗೆಜ್ಜೆ, ಬಳೆ, ಕಿವಿಯೋಲೆ, ಉಂಗುರ, ಜೊತೆಗೆ ಕೇರಳ ಹಾರವನ್ನೂ ಇಂದು ಮಹಿಳೆಯರು ಖುಷಿಯಿಂದ ಧರಿಸುತ್ತಿದ್ದಾರೆ. ಆದರೆ ಅದೇ ಹಳೇ ವಿನ್ಯಾಸದಲ್ಲಿ ಅದು ಮನಸ್ಸಿಗೆ ಸಂತಸ, ಹೊಸತನದ ಅನುಭವ ನೀಡುವುದು ಕಡಿಮೆ. ಹಾಗಾಗಿ ಇಂದು ವಿನೂತನವಾಗಿ ಕೇರಳ ಫ್ಯಾಷನ್ ಬೆಳ್ಳಿ ಆಭರಣದಲ್ಲಿ ಒಡಮೂಡಿದೆ. ಇದರ ವಿನ್ಯಾಸ ಅದ್ಭುತವಾಗಿದ್ದು, ಯುವತಿಯರನ್ನು ಥಟ್ಟನೆ ಸೆಳೆಯುವಂತಿದೆ.

ಅಲಂಕಾರಕ್ಕೂ ಸರಿ, ಜೋಪಾನವಾಗಿ ಇಡುವುದಕ್ಕೂ ಸುಲಭ, ಕುಸುರಿ ಕೆಲಸ ಕಡಿಮೆ ಇದ್ದು ವಿನ್ಯಾಸ ಸೊಗಸಾಗಿರುವುದರಿಂದ ಧರಿಸಲು ಖುಷಿ. ಪ್ರಯಾಣ ಕಾಲದಲ್ಲಿ ಒಯ್ಯಲು ಸುಲಭ, ಜನಸಾಮಾನ್ಯರಿಗೂ ಕೈಗೆಟಕುವ ಆಭರಣ ಇದು. ಆಧುನಿಕ ಮನೋಭಾವದ ಮಹಿಳೆಯರಿಗೆ ಸೂಕ್ತವಾದ ಒಡವೆ ಇದು.

ಒಡವೆಗೂ ಮಹಿಳೆಯರಿಗೂ ಎಲ್ಲಿಲ್ಲದ ಅವಿನಾಭಾವ ನಂಟು. ಹಬ್ಬಹರಿದಿನ, ಮದುವೆ, ಮುಂಜಿ, ಶುಭ ಸಮಾರಂಭಗಳೇ ಇರಲಿ, ಎಲ್ಲರ ಕಣ್ಣು ಯಾವ್ಯಾವ ಮಹಿಳೆ ಏನೇನು ಆಭರಣ ಧರಿಸಿದ್ದಾಳೆ ಎಂಬುದರ ಮೇಲೆ ನೆಟ್ಟಿರುತ್ತದೆ. ಇದರಲ್ಲಿ ತಪ್ಪೇನೂ ಇಲ್ಲ.